ಶ್ರೀಮತಿ ಮೋಟಮ್ಮ:– ಜಿಲ್ಲಾಪರಿಷತ್ತಿನಿಂದ ತುಂಬ ವರ್ಕ್ಸ್ ಬೇರೆ ಬೇರೆ ಕ್ಷೇತ್ರಗಳಿಂದಲೂ ವರ್ಗಾವಣೆಯಾಗಿದೆ. ಇದೇ ರೀತಿ ಕಾಮಗಾರಿಗಳನ್ನು ಮಾತ್ರ ವಹಿಸಿಕೊಂಡು ಅದಕ್ಕೆ ಜಿಲ್ಲಾ ಪರಿಷತ್ತಿನಲ್ಲಿ ಇಟ್ಟಂತಹ ಹಣವನ್ನು ನೀವು ಖರ್ಚು ಮಾಡದಿದ್ದರೆ ಆ ಹಣ ಜಿಲ್ಲಾಪರಿಷತ್ತಿನಲ್ಲಿ ಉಳಿದಿದೆಯೋ ? ಅಥವಾ ವಾಪಸ್ಸು ಹೋಗಿದೆಯೋ ? ಅದನ್ನು ಖರ್ಚು ಮಾಡುತ್ತೀರೋ ಬಿಡುತ್ತೀರೋ ಎನ್ನುವುದು ಬೇಕು.

ಡಾ।। ಆರ್.ಬಿ. ಚೌಧುರಿ:– ದೇವಿಕೆರೆಯ ಅನುದಾನದ ವರ್ಗಾವಣೆಯ ಬಗ್ಗೆ ಪತ್ರ ವ್ಯವಹಾರ ಇನ್ನೂ ನಡೆಯುತ್ತಿದೆ. ಅನುದಾನವನ್ನು ನಮಗೆ ಕೊಟ್ಟಿಲ್ಲ. ಈಗ ಜಿಲ್ಲಾಪರಿಷತ್ತಿನವರು ದೇವಿಕೆರೆಯ ಕೆಲಸ.....

ಶ್ರೀಮತಿ ಮೋಟಮ್ಮ:– ನಾನು ಹೇಳಿದ್ದು ಅವರಿಗೆ ಅರ್ಥವಾಗಿಲ್ಲ. ನಿಮಗೆ ಕೊಟ್ಟಿಲ್ಲ ಅನ್ನುವುದು ನಮಗೂ ಗೊತ್ತಾಯಿತು. ಆದರೆ ಹೇಗೆ ತೆಗೆದುಕೊಳ್ಳುತ್ತೀರಿ, ಖರ್ಚು ಹೇಗೆ ಮಾಡುತ್ತೀರಿ ? ಇದರಿಂದ ನಮ್ಮ ಕ್ಷೇತ್ರದ ಕೆಲಸಗಳಿಗೆ ಅನ್ಯಾಯವಾಗಲಿಲ್ಲವೇ. ತೊಂದರೆಯಾಗಲಿಲ್ಲವೇ ?

ಡಾ।। ಆರ್.ಬಿ. ಚೌಧುರಿ:– ತೊಂದರೆಯಾಗಿದೆ, ಅದರ ಪರಿಶೀಲನೆ ನಡೆದಿದೆ. ಯಾವ ತರಹ ತೆಗೆದುಕೊಳ್ಳಬೇಕೆಂಬ ಬಗ್ಗೆ ಪರಿಶೀಲನೆ ನಡೆದಿದೆ. ಜಿಲ್ಲಾಪರಿಷತ್ತಿನವರು ಕೊಡುತ್ತಿಲ್ಲ, ತಾವೂ ಮಾಡುತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್:– 226(1407)ನೇ ಪ್ರಶ್ನೆಗೆ ಜಿಲ್ಲಾಪರಿಷತ್ತಿನಿಂದ ಉತ್ತರ ಬರಬೇಕಾದೆ. ಒಂದು ವಾರ ತಾವು ಕಾಲಾವಕಾಶವನ್ನು ಕೊಡಿ.

ಕನಕಪುರ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆ

228 (1335): ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನಕಪುರ ತಾಲ್ಲೂಕಿನಲ್ಲಿ ಗಂಗಾಕಲ್ಯಾಣ ಯೋಜನೆ ಅನುಷ್ಠಾನವು ಯಾವ ಇಲಾಖೆ ಮುಖಾಂತರ ನಡೆಯುತ್ತಿದೆ ಮತ್ತು ಯಾವ ಯಾವ ಗ್ರಾಮಗಳಲ್ಲಿ ಸರ್ಕಾರವು ಗಂಗಾಕಲ್ಯಾಣ ಯೋಜನೆ ತೆಗೆದುಕೊಂಡಿದೆ;

ಆ) 1985–86ರಿಂದ ಇಲ್ಲಿಯವರೆಗೆ ಪ್ರತಿವರ್ಷಗಳ ಪ್ರಕಾರ ವಿವರ ಒದಗಿಸುವುದು;

ಇ) ಈ ಯೋಜನೆಗೆ ಮಂಜೂರಾಗಿರುವ ಸ್ಥಳಗಳಾವುವು; ಎಷ್ಟು ಯೋಜನೆಗಳು ಕಾರ್ಯರೂಪದಲ್ಲಿವೆ ಹಾಗೂ ಕಾರ್ಯಾಚರಣೆ ಇಲ್ಲದೆ ಸ್ಥಗಿತಗೊಂಡಿರುವ ಯೋಜನೆಗಳೆಷ್ಟು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಜಿಲ್ಲಾಪರಿಷತ್ತಿನಿಂದ ನಡೆಯುತ್ತಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ಅ) ಮಂಜೂರಾದ ಸ್ಥಳಗಳ ಸಂಖ್ಯೆ	47
ಆ) ಕಾರ್ಯರೂಪದಲ್ಲಿರುವ ಯೋಜನೆಗಳ ಸಂಖ್ಯೆ	20
ಇ) ವಿಫಲಗೊಂಡ ಯೋಜನೆಗಳ ಸಂಖ್ಯೆ	22
ಈ) ಪ್ರಾರಂಭಿಸಬೇಕಾಗಿರುವ ಯೋಜನೆಗಳ ಸಂಖ್ಯೆ	5

ಅನುಬಂಧ

(ವಿಧಾನಸಭೆಯ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1335)

1985-86ನೇ ಸಾಲಿನಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ವಿವರ (ವರ್ಷವಾರು).

ಕ್ರ. ಸಂ.	ವರ್ಷ	ಗಂಗಾ ಕಲ್ಯಾಣ ಯೋಜನೆಯನ್ನು ತೆಗೆದುಕೊಳ್ಳಲಾದ ಗ್ರಾಮದ ಹೆಸರು	ಷರಾ
1	2	3	4
		1) ವರ್ಗ - 1	
1.	1985-86	ಯಾವುದೂ ಇಲ್ಲ-	
2.	1986-87	1. ನಲ್ಲಹಳ್ಳಿ ದೊಡ್ಡಿ	ಯೋಜನೆಗಳು
		2. ಬಾಪೂಜಿ ಕಾಲೋನಿ - 1	ವಿಫಲಗೊಂಡಿವೆ
		3. ಹೊಸ ಹೆಬ್ಬಾಳ್ 'ಎ'	
		4. ಹೊಸಹೆಬ್ಬಾಳ್ 'ಬಿ'	
		5. ಹೊನ್ನಹಳ್ಳಿ	
		6. ಚೂಡಹಳ್ಳಿ	
		7. ಅತ್ತಿ ಹಳ್ಳಿ	
		8. ಅಂಬೇಡ್ಕರ್ ಕಾಲೋನಿ - 1	
		9. ಕೆಬ್ಬೇದೊಡ್ಡಿ	
3.	1987-88	ಯಾವುದೂ ಇಲ್ಲ	
4.	1988-89	1. ಕಂಸಾಗಾರ ದೊಡ್ಡಿ	
5.	1989-90	1. ಗೊಲ್ಲರ ದೊಡ್ಡಿ	ಯೋಜನೆಗಳು ಮುಗಿದಿದ್ದು
		2. ಅಲೂರು	ಯಶಸ್ವಿಯಾಗಿ ಕಾರ್ಯ
		3. ನಾಯಕನಹಳ್ಳಿ	ನಿರ್ವಹಿಸುತ್ತಿವೆ
		4. ಬಾಪೂಜಿ ಕಾಲೋನಿ - 2	
		5. ಚುಂಚಿ ಕಾಲೋನಿ	
		6. ಅಂಬೇಡ್ಕರ್ ಕಾಲೋನಿ - 2	
6.	1990-91	ಯಾವುದೂ ಇಲ್ಲ	
7.	1991-92	1. ಚಾಚಹಳ್ಳಿ ದೊಡ್ಡಿ	
		ಒಟ್ಟು 17 ಕೆಲಸಗಳು	

(2) ವರ್ಗ – 2

1.	1985–86	ಯಾವುದೂ ಇಲ್ಲ	
2.	1986–87	1. ಸಾತನೂರು	ಯೋಜನೆಗಳು
		2. ಚಿಕ್ಕಮುದವಾಡಿ	ವಿಫಲಗೊಂಡಿವೆ
		3. ಅಳಕುಳಿ – 3	
		4. ಚುಂಚಿ	
		5. ಅರೇಕಟ್ಟೇ ದೊಡ್ಡಿ	
		6. ಹೊನ್ನಹಳ್ಳಿ – 1	
		7. ತೋಟಹಳ್ಳಿ – 1	
		8. ಹೊಸದುರ್ಗ	
		9. ಮಲ್ಲಾಪುರ	
		10. ತಟ್ಟಿಗುಪ್ಪೆ	
		11. ಚಿಕ್ಕನ ಹಳ್ಳಿ	
		12. ಬೆಂಡಿಗನಹಳ್ಳಿ – ಪ್ಲಾಟ್ – 1	
		13. ತೋಟಹಳ್ಳಿ – 2	
3.	1987–88	ಯಾವುದೂ ಇಲ್ಲ	
4.	1988–89	ಯಾವುದೂ ಇಲ್ಲ	
5.	1989–90	1. ಮುಳ್ಳಹಳ್ಳಿ	ಯೋಜನೆಗಳು ಮುಗಿದಿದ್ದು
		2. ಮಾದಗಹಳ್ಳಿ	ಯಶಸ್ವಿಯಾಗಿ ಕಾರ್ಯ
		3. ಅರಿಹೊಸಹಳ್ಳಿ	ನಿರ್ವಹಿಸುತ್ತಿವೆ
		4. ಅಚ್ಚಲು	
		5. ಬೊಮ್ಮನಹಳ್ಳಿ	
		6. ವೀರೇಗೌಡನ ದೊಡ್ಡಿ	
		7. ಬಂಡಿಗನ ಹಳ್ಳಿ	
		8. ಕಾಡಶಿವನಹಳ್ಳಿ	
		9. ಹೊಸದುರ್ಗ	
		10. ಕೆಂಡೇಗೌಡನ ದೊಡ್ಡಿ	
		11. ಅಲ್‌ಕುಳಿ – 1	ಕೆಲಸವನ್ನು
		12. ವಿರೂಪಸಂದ್ರ	ಪ್ರಾರಂಭಿಸಬೇಕಾಗಿದೆ
		13. ಹೊನ್ನಹಳ್ಳಿ	
		14. ಅಲ್‌ಕುಳಿ – 2	ಯೋಜನೆ ಮುಗಿದಿದ್ದು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ
		15. ನಾಯಕನ ಹಳ್ಳಿ	ಕೆಲಸ ಪ್ರಾರಂಭಿಸಬೇಕಾಗಿದೆ
		16. ಬಿಜ್ಜಹಳ್ಳಿ	

6.	1990-91	1. ಛೇಲಿ ಕೊತ್ತನೂರು	ಯೋಜನೆ ಮುಗಿದಿದ್ದು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ
		ಒಟ್ಟು 30 ಕೆಲಸಗಳು	
		ವರ್ಗ 1 + ವರ್ಗ 2 = 17 + 30 = 47 ಕೆಲಸಗಳು	

ನೀಗ 89 ಸನೀವಿ 93

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಅಧ್ಯಕ್ಷರೆ, ನಾನು ಗಂಗಾಕಲ್ಯಾಣ ಯೋಜನೆಯ ವಿಚಾರದಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರಿಗೆ ಪ್ರಶ್ನೆಯನ್ನು ಕೇಳಿದ್ದೆ, ಇದು ನನಗೆ ಬರುವುದಿಲ್ಲ ಎಂದು ಹೇಳಿ ಸಣ್ಣ ನೀರಾವರಿ ಇಲಾಖೆಯ ರಾಜ್ಯ ಸಚಿವರಿಗೆ ವರ್ಗಾಯಿಸಿದರು. ಕನಕಪುರ ತಾಲ್ಲೂಕಿನಲ್ಲಿ ಗಂಗಾಕಲ್ಯಾಣ ಯೋಜನೆಯ ಅನುಷ್ಠಾನವು ಯಾವ ಇಲಾಖೆಯ ಮುಖಾಂತರ ನಡೆಯುತ್ತಿದೆ ಎಂದು ಕೇಳಿದ್ದಕ್ಕೆ ಜಿಲ್ಲಾಪರಿಷತ್ತಿನಿಂದ ನಡೆಯುತ್ತಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ಉತ್ತರ ಕೊಟ್ಟಿರುವುದು ಸರಿಯಾಗಿಲ್ಲ, ಸತ್ಯಕ್ಕೆ ದೂರವಾದುದಾಗಿದೆ. ಅಧಿಕಾರಿಗಳು ಏತಕ್ಕೆ ಈ ರೀತಿಯಾಗಿ ಮಿಸ್‌ಗೈಡ್ ಮಾಡುತ್ತಾರೋ ನನಗಂತೂ ಅರ್ಥವಾಗುತ್ತಿಲ್ಲ. ನನ್ನ ತಾಲ್ಲೂಕಿನಲ್ಲಿ 47 ಜಾಗದಲ್ಲಿ ಜಿಲ್ಲಾಪರಿಷತ್ತಿನಿಂದ ಗಂಗಾಕಲ್ಯಾಣ ಯೋಜನೆಯನ್ನು ಕಾರ್ಯರೂಪಕ್ಕೆ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ 20 ಮಾತ್ರ ಕಾರ್ಯರೂಪದಲ್ಲಿ ಇವೆ, ಇನ್ನು 22 ವಿಫಲವಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಜಿಲ್ಲಾಪರಿಷತ್ತು ಪ್ರಾರಂಭವಾದಾಗ ಮೊದಲು ಜಿಲ್ಲಾಪರಿಷತ್ತಿನಿಂದ ಕಾರ್ಯರೂಪವಾಗುತ್ತಿತ್ತು. ಅದಾದನಂತರ ಎಸ್.ಸಿ., ಎಸ್.ಟಿ. ಕಾರ್ಪೊರೇಷನ್ ಎಂದು ಹೇಳಿದರು. ಈಗ ಮತ್ತೆ ಇದನ್ನು ಸಣ್ಣ ನೀರಾವರಿ ಯೋಜನೆಯ ಮುಖಾಂತರ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಇದು ಬಹಳ ಒಳ್ಳೆಯ ಯೋಜನೆಯಾಗಿದೆ. ಇದು ಬಡವರಿಗೆ, ಹಿಂದುಳಿದ ಜನಾಂಗ ಮತ್ತು ಎಸ್.ಸಿ., ಎಸ್.ಟಿ. ಯವರಿಗೆ ಅನುಕೂಲವಾಗುವ ಯೋಜನೆಯಾಗಿದೆ. ಈ ಅಧಿಕಾರಿಗಳು ಇವರಿವರ ಕಿತ್ತಾಟದಲ್ಲಿ ಇಂತಹ ಒಂದು ಕಾರ್ಯಕ್ರಮ ಬಡವಾಗಿರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಆದ್ದರಿಂದ ಮಂತ್ರಿಗಳು 47 ಮಂಜೂರಾಗಿದೆ, 20 ಮಾತ್ರ ಕಾರ್ಯರೂಪದಲ್ಲಿ, 22 ವಿಫಲವಾಗಿದೆ, ಇನ್ನು 5 ಪ್ರಾರಂಭವಾಗಬೇಕೆಂದು ನೀವು ಏನು ಪಟ್ಟಿಯನ್ನು ಕೊಟ್ಟಿದ್ದೀರಿ ಇದು ಸುಳ್ಳು. ನಮ್ಮ ತಾಲ್ಲೂಕಿನಲ್ಲಿ 5 ಕಡೆ ಕೂಡ ಸರಿಯಾಗಿ ಕಾರ್ಯರೂಪವಾಗುತ್ತಿಲ್ಲ. ಇದಕ್ಕೆ ಬರೀ ನಿಮ್ಮ ಹಣ ಖರ್ಚಾಗಿದೆಯೇ ಹೊರತು ಕೆಲಸ ಆಗಿಲ್ಲ. ಈ ಯೋಜನೆಯಿಂದ ನೂರು ಎಕರೆಯಷ್ಟಕ್ಕೂ ನೀವು ಸೌಲಭ್ಯವನ್ನು ಒದಗಿಸಿಕೊಟ್ಟಿಲ್ಲ. ಯಾರು ಸರಿಯಾಗಿ ಈ ಯೋಜನೆಯನ್ನು ಮಾಡುತ್ತಾರೆ, ಎಸ್.ಸಿ., ಎಸ್.ಟಿ. ಕಾರ್ಪೊರೇಷನ್‌ನಿಂದ ಮಾಡುತ್ತೀರೋ, ಇಲ್ಲದಿದ್ದರೆ ಜಿಲ್ಲಾಪರಿಷತ್ತಿನಿಂದ ಮಾಡುತ್ತೀರೋ, ಮೈನರ್ ಇರಿಗೇಷನ್‌ನಿಂದ ಮಾಡುತ್ತೀರೋ ಎನ್ನುವುದನ್ನು ಸರಿಯಾಗಿ ಹೇಳಬೇಕು. ಇದರಿಂದ ಎಷ್ಟು ಎಕರೆಗೆ ಅನುಕೂಲವಾಗುತ್ತಿದೆ ಎನ್ನುವುದಕ್ಕೆ ತಾವು ಉತ್ತರ ಹೇಳಬೇಕು.

ಡಾ।। ಆರ್.ಬಿ. ಚೌಧುರಿ:– ಮಾನ್ಯ ಸದಸ್ಯರು ಹೇಳುವುದು ನಿಜ, ಇದರಲ್ಲಿ ಕನ್‌ಫ್ಯೂಷನ್ ಇರುವುದು ನಿಜ. ನನಗೆ ತಿಳಿದು ಬಂದ ಪ್ರಕಾರ ಈ ಕೆಲಸ ಮೈನರ್ ಇರಿಗೇಷನ್‌ಗೆ ಸಂಬಂಧಪಟ್ಟಿರುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್:– ಏತಕ್ಕೆ ಕಷ್ಟಪಡುತ್ತೀರಿ ? ನೀವು ಕಷ್ಟಪಡುವುದರಿಂದ ಪ್ರಯೋಜನವಿಲ್ಲ. ನಿಮಗೂ ಅರ್ಥವಾಗುವುದಿಲ್ಲ. ಅಧಿಕಾರಿಗಳಿಗೂ ಅರ್ಥವಾಗಿಲ್ಲ. ನೀವು ಉತ್ತರವನ್ನು ಹೇಳುವುದಕ್ಕೆ ಏತಕ್ಕೆ ಕಷ್ಟಪಡುತ್ತಿದ್ದೀರಿ ? ನಿಮ್ಮ ಇಲಾಖೆಯ ಮುಖಾಂತರ ಏನಾದರೂ

ನಡೆದಿದ್ದರೆ ನಿಮ್ಮನ್ನು ನಾವು ಕೇಳಬಹುದು. ನಿಮ್ಮ ಇಲಾಖೆಯ ಮುಖಾಂತರ ಆಗಿಲ್ಲ. ಸುಮ್ಮನೆ ಅಧಿಕಾರಿಗಳು ಮಿಸ್‌ಗೈಡ್ ಮಾಡುತ್ತಿದ್ದಾರೆ.

ಶ್ರೀ ಬಿ. ಶಿವರಾಮ್:– ಮಾನ್ಯ ಅಧ್ಯಕ್ಷರೆ, ಇದನ್ನು ಮೈನರ್ ಇರಿಗೇಷನ್ನಿಗೆ ಹ್ಯಾಂಡ್ ಓವರ್ ಮಾಡಿಲ್ಲ. ನಾನು ಇದರ ಬಗ್ಗೆ ಮಾತನಾಡಿದಾಗ ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಧರ್ಮಸಿಂಗ್‌ರವರು ಇದಕ್ಕೆ ಉತ್ತರವನ್ನು ಕೊಟ್ಟರು. ಒಂದು ಆರ್ಡರನ್ನು ಇಷ್ಯೂ ಮಾಡಿದ್ದಾರೆ. ಎಸ್.ಸಿ., ಎಸ್.ಟಿ. ಕಾರ್ಪೊರೇಷನ್ ಮೂಲಕ ತೆಗೆದುಕೊಳ್ಳಿ ಎಂದು ಸ್ವಲ್ಪ ಹಣವನ್ನು ಅವರೇ ಬಿಡುಗಡೆ ಮಾಡಿದ್ದಾರೆ. ಅವೆಂಡಿಕ್ಸ್ 'ಸಿ'ನಲ್ಲಿ ಸ್ವಲ್ಪ ಹಣವನ್ನು ಜಿಲ್ಲಾಪರಿಷತ್ತಿಗೆ ಬಿಡುಗಡೆ ಮಾಡಿದ್ದಾರೆ. ಆ ಗೊಂದಲದಲ್ಲಿ ಅವರು ಕೆಲಸಗಳನ್ನು ಮಾಡಿಲ್ಲ. ಒಂದು ಸರ್ಕ್ಯುಲರ್‌ನಲ್ಲಿ ಎಂ.ಐ.ಗೆ ಹ್ಯಾಂಡ್ ಓವರ್ ಮಾಡಿದ್ದೇವೆ ಎನ್ನತಕ್ಕಂಥದ್ದು ಇದೆ. ಒಟ್ಟಾರೆ ಆ ಕೆಲಸ ಎಲ್ಲೂ ಪ್ರಗತಿಯಲ್ಲಿಲ್ಲ. ಹಾಗಾಗಿ ನಮ್ಮ ಹಾಸನ ಜಿಲ್ಲೆಯಲ್ಲಿ 21 ಲಕ್ಷ ರೂಪಾಯಿಯ ಹಣ ಉಪಯೋಗವಾಗಿಲ್ಲ. ಇದಕ್ಕೆ ಸೂಕ್ತವಾದಂತಹ ಆದೇಶವನ್ನು ಯಾರೂ ಕೊಡಲಿಕ್ಕೆ ತಯಾರಿಲ್ಲ. ಅದು ಯಾವ ರೀತಿ ಅನುಷ್ಠಾನಕ್ಕೆ ಬರುತ್ತದೆ ಎನ್ನುವುದು ನಮಗಂತೂ ಗೊತ್ತಿಲ್ಲ. ನಮ್ಮಲ್ಲೂ 21 ಇದೇ ರೀತಿಯಾಗಿದೆ. ಏನೇನು ಕೆಲಸ ಮಾತ್ರ ಆಗಿಲ್ಲ. ಎಂ.ಐ.ನವರು ಮಾಡುತ್ತಾರೋ, ಜಡ್.ಪಿ.ನವರು ಮಾಡುತ್ತಾರೋ ಎಸ್.ಸಿ., ಎಸ್.ಟಿ. ಕಾರ್ಪೊರೇಷನ್‌ನವರು ಮಾಡುತ್ತಾರೋ ಗೊತ್ತಿಲ್ಲ ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಅಧ್ಯಕ್ಷರೆ, 1988–89ರಲ್ಲಿ 7 ಕಡೆ ಆಗಿದೆ. ಮತ್ತೆ ಸರ್ಕಾರಕ್ಕೆ ವಾಪಸ್ಸು ತೆಗೆದುಕೊಂಡ ಮೇಲೆ ಒಂದು ಕಡೆಯೂ ಗಂಗಾ ಕಲ್ಯಾಣ ಯೋಜನೆಯನ್ನು ನಾವು ಮಾಡಲಿಕ್ಕೆ ಆಗಿಲ್ಲ. ಬಹಳ ವಿಫಲಗೊಂಡಿವೆ. ದಯವಿಟ್ಟು ಎಲ್ಲೆಲ್ಲಿ ಆಗಿದೆ ಇದನ್ನು ಸರಿ ಮಾಡಲು ಶಾಸಕರ ಸಮಿತಿಯನ್ನು ರಚನೆ ಮಾಡಿದರೆ ಒಳ್ಳೆಯದು.. ನಮ್ಮ ತಾಲ್ಲೂಕ್‌ಗಳಿಗೆ ತಾವು ಹೋಗಿ ನೋಡಿದರೆ ನಿಜಾಂಶ ಗೊತ್ತಾಗುತ್ತದೆ. ಇವರು 47 ಕಡೆ ಕಾರ್ಯರೂಪದಲ್ಲಿ ಇವೆ ಎಂದು ಹೇಳುತ್ತಾರೆ. ಎರಡು ಕಡೆಯೂ ಕೂಡ ಕಾರ್ಯರೂಪದಲ್ಲಿ ಆಗಿಲ್ಲ. ಆದ್ದರಿಂದ ಮಂತ್ರಿಗಳು ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ಮುನ್ನ ಬಂದು ಸ್ಥಳದಲ್ಲಿ ನೋಡಿಬಿಟ್ಟು ಇದನ್ನು ಸರಿಯಾಗಿ ಕಾರ್ಯರೂಪಕ್ಕೆ ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೇ ಎಂದು ನೋಡಬೇಕು. ಇಲ್ಲದಿದ್ದರೆ ಮತ್ತೆ ನೀವು ಜಿಲ್ಲಾಪರಿಷತ್ತಿಗೆ ವರ್ಗಾವಣೆಯನ್ನು ಮಾಡಬೇಕು.

ಶ್ರೀ ಬಿ. ಶಿವರಾಮ್:– ಇದರ ಬಗ್ಗೆ ಒಂದು ಮೀಟಿಂಗನ್ನು ಕರೆಯುವುದು ಬಹಳ ಮುಖ್ಯವಾಗಿದೆ.

ಡಾ।। ಆರ್.ಬಿ. ಚೌಧುರಿ:– ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಮಾಡಬೇಕೆಂದು ಸರ್ಕ್ಯುಲರ್ ಬಂದಿದ್ದು ನಿಜ. ಆದರೆ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಕನ್‌ಫ್ಯೂಷನ್ ಮಾತ್ರ ಇದ್ದೇ ಇದೆ. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:– ಕನ್‌ಫ್ಯೂಷನ್ ಇದ್ದರೆ ಅವರನ್ನು ಕರೆದು ಮಾತನಾಡಿ.

ಶ್ರೀ ಡಿ.ಕೆ. ಶಿವಕುಮಾರ್:– ಅಲ್ಲಿಗೆ ಸದಸ್ಯರುಗಳನ್ನು ಮತ್ತು ಅಧಿಕಾರಿಗಳನ್ನು ಕಳುಹಿಸಿದರೆ ನಿಜಾಂಶ ಏನಿದೆ ಎನ್ನುವುದು ಗೊತ್ತಾಗುತ್ತದೆ. ಸುಮ್ಮನೆ ಬರೀ ಪೇಪರಿನಲ್ಲಿ 47 ಕಡೆ ಮಾಡಿದ್ದೇವೆಂದು ಹೇಳಿ, 5 ಎಕರೆಗೆ ನಾವು ನೀರಾವರಿಯನ್ನು ಒದಗಿಸಲಿಲ್ಲ ಎಂದರೆ ಸರ್ಕಾರದ ಲಕ್ಷಾಂತರ ರೂಪಾಯಿಯ ಹಣ ಬಡವರಿಗೆ ತಲುಪಬೇಕು.